ಕೆಂಬ ಸುಳ್ಳು ವರದಿಯನ್ನು ಕೊಟ್ಟು ಅವರನ್ನು ಅಲ್ಲಿಂದ ಹೊರದೂಡುವುದಾಗಿ ಹೇಳಿತ್ತಿದ್ದಾರೆ. ಇದೇ ಜಾಗದಲ್ಲಿ ಮೊದಲು ೫೦೦ ಎಕರೆ ಜಮೀನನ್ನು ಬೇಸಾಯಕ್ಕೆ ಟಿಬೇಟಿಯನ್ಸ್‌ಗೆ ಕೊಟ್ಟಿದ್ದರು. ಆದರೆ ಈ ಜಮೀನು ಸಾಗುವಳಿಗೆ ಯೋಗ್ಯವಾಗಿಲ್ಲವೆಂದು ಅವರು ಬಿಟ್ಟುಬಿಟ್ಟಿದ್ದರು. ಅವರು ಬಿಟ್ಟ ಜಮೀನಿನಲ್ಲಿ ಇವರು ಸಾಗುವಳಿ ಮಾಡುತ್ತಿದ್ದಾರೆ. ಜೊತೆಗೆ ಅಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ, ಆದಕಾರಣ ಸತ್ಯಸಂಗತಿ ತಿಳಿದುಕೊಳ್ಳಲು ತಾವು ಮತ್ತೊಮ್ಮೆ ವರದಿ ತರಿಸಿಕೊಳ್ಳಬೇಕೆಂದು ಹೇಳುತ್ತೇನೆ. ಜೊತೆಗೆ ಅರಣ್ಯ ಪ್ರದೇಶಗಳನ್ನು ಯಾರು ಯಾರು ಅತಿಕ್ರಮಣ ಮಾಡಿ ಸಾಗುವಳಿ ಮಾಡುತ್ತಿದ್ದಾರೆ, ಅಂತಹ ಪ್ರದೇಶಗಳನ್ನು ಅವರವರ ಹೆಸರಿಗೇ ಖಾತೆ ಮಾಡುವ ಸಲುವಾಗಿ ಒಂದು ಸಮಿತಿಯನ್ನು ನೇಮಕ ಮಾಡಲಾಗಿದೆ. ಆ ಸಮಿತಿಯವರ ಮೂಲಕ ಈ ಪ್ರಕರಣದ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು, ಅದನ್ನು ಕಾರ್ಯಗತ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್. —ಮಾನ್ಯ ಸದಸ್ಯರು ಹೊಸದಾಗಿ ಒಂದು ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ನಾನು ಅದನ್ನು ವಿಚಾರಣೆ ಮಾಡಿಸಿ ಅವರಿಗೆ ತಿಳಿಸುತ್ತೇನೆ. ಮತ್ತು ಇದಕ್ಕೆ ಸಂಬಂಧಪಟ್ಟ ಸಮಿತಿಯವರಿಗೂ ಸಹ ಈ ಗಿರಿಜನರ ಸಮಸ್ಯೆಗಳನ್ನು ಅರಿತುಕೊಂಡು ವರದಿ ಕೊಡುವಂತೆ ತಿಳಿಸುತ್ತೇನೆ.

Post Graduate Lecturers in Government Junior Colleges

461. SRI P.N. REDDI (Malur).—Will the Minister for Education be pleased to state:—

(a) whether the Post Graduate teachers working in the Department were asked to work as lecturers to teach various subjects in the Government Junior Colleges started in 1972 ;

(b) if so, whether the said teachers are continued as lecturers; if not, number of them reverted :

(c) whether it has come to their notice that the teachers working in the Department acquired Post Graduate degrees earlier *i.e.*, in the years 1964, 65, 66 have not been selected as lecturers and teachers qualified subsequently are promoted as lecturers ;

(d) the action proposed to take by them to set right the injustice done to those who are reverted by considering only seniority without considering the year of acquirin the Post Graduate degree ?

SRI G.B. SHANKAR RAO (Minister for Education).—

(a) Yes.

(b) When appointments were made to fill up promotional posts by direct recruitment by Government in the year 1975, 248 teachers working in the said posts and were not senior were reverted and only 18 lecturers were reverted from 28th August 1974 when promotions were made according to merit list.

(c) Yes.

(d) As promotions were made according to the Cadre and Recruitment Rules and seniority *cum* merit no injustice has been one to the reverted teachers.

ಶ್ರೀ ಪಿ.ಎನ್. ರೆಡ್ಡಿ —೧೯೭೨ರಲ್ಲಿ ಜೂನಿಯರ್ ಕಾಲೇಜುಗಳಿಗೆ ವಿದ್ಯಾ ಇಲಾಖೆಯವರು ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಿರಲಿಲ್ಲವೇ ಮತ್ತು ೧೯೭೨, ೧೯೭೩ ಹಾಗೂ ೧೯೭೪ರಲ್ಲಿ ಅವರುಗಳಿಗೆ ವಾರ್ಷಿಕ ಇಂಕ್ರಿಮೆಂಟ್‌ಗಳನ್ನು ಕೊಟ್ಟಿರಲಿಲ್ಲವೇ ?

† ಶ್ರೀ ಜಿ.ಬಿ. ಶಂಕರ್‌ರಾವ್.—ಆ ಸಮಯದಲ್ಲಿ ಆಡ್-ಹಾಕ್-ಬೇಸಿಸ್ ಮೇಲೆ ಇವರನ್ನು ನೇಮಕ ಮಾಡಲಾಗಿತ್ತು. ಏಕೆಂದರೆ ಆಗ ಕೇಡರ್ ಆಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇನ್ನೂ ಆಗಿರಲಿಲ್ಲ. ೧೯೭೪ರಲ್ಲಿ ಈ ರೂಲ್ಸ್‌ನ್ನು ಮಾಡಿದ ಮೇಲೆ ಶೇಕಡಾ ೫೦ ಭಾಗವನ್ನು ನೇರವಾಗಿ ಭರ್ತಿ ಮಾಡುವುದು ಹಾಗೂ ಇನ್ನುಳಿದ ೫೦ ಭಾಗವನ್ನು ಬಡ್ತಿ ಮೂಲಕ ನೇಮಕ ಮಾಡುವುದು ಎಂದು ರೂಲ್ಸ್ ಮಾಡಿದ ಮೇಲೆ ಪಿ.ಎಸ್.ಸಿ. ಅವರಿಗೆ ಶೇಕಡಾ ೫೦ ಭಾಗವನ್ನು ರೆಕ್ರೂಟ್‌ಮೆಂಟ್ ಮೂಲಕ ಭರ್ತಿ ಮಾಡಬೇಕೆಂದು ತಿಳಿಸಲಾಯಿತು

ಶ್ರೀ ಪಿ.ಎನ್. ರೆಡ್ಡಿ.—೧೯೭೨ರಲ್ಲಿ ಈ ಸ್ನಾತಕೋತ್ತರ ಪದವೀಧರರ ಬಗ್ಗೆ ಸೀನಿಯಾರಿಟಿ ಪಟ್ಟಿಯನ್ನು ತಯಾರಿಸಿರಲಿಲ್ಲವೇ ?

ಶ್ರೀ ಜಿ. ಬಿ. ಶಂಕರ್‌ರಾವ್.—ಆ ಸಮಯದಲ್ಲಿ ಈ ಜೂನಿಯರ್ ಕಾಲೇಜುಗಳಿಗೆ ಪೋಸ್ಟ್ ಗ್ರಾಜುಯೇಟ್ಸ್ ಕ್ವಾಲಿಫಿಕೇಷನ್ ಯಾರು ಯಾರಿಗೆ ಇತ್ತೋ. ಅಂತಹವರ ಬಗ್ಗೆ ಒಂದು ಪ್ರಾವಿಷನಲ್ ಸೀನಿಯಾರಿಟಿ ಲಿಸ್ಟನ್ನು ತಯಾರಿಸಿ ಅದರ ಆಧಾರದ ಮೇಲೆ ನೇಮಕ ಮಾಡಲಾಯಿತು.

ಶ್ರೀ ಪಿ.ಎನ್. ರೆಡ್ಡಿ.—೧೯೬೩, ೧೯೬೪ ಹಾಗೂ ೧೯೬೫ರಲ್ಲಿ ಕೆಲವರು ಸ್ನಾತಕೋತ್ತರ ಪದವಿ ಪಡೆದಿದ್ದರೂ ಸಹ ಅವರಿಗೆ ಅರ್ಹತೆ ಇಲ್ಲವೆಂದು ಹೇಳಿ, ೧೯೬೫ರಲ್ಲಿ ಯಾರು ಕರೆಸ್ಪಾಂಡೆನ್ಸ್ ಕೋರ್ಸ್ ಮಾಡಿದ್ದರೋ ಅಂತಹವರಿಗೆ ಅರ್ಹತೆ ಇದೆ ಎಂದು ಮಾನ್ಯತೆ ಕೊಟ್ಟಿದ್ದರಿಂದ, ಈ ಮೊದಲು ನೇಮಕ ಮಾಡಿದ್ದ ಉಪನ್ಯಾಸಕರುಗಳ ಮನಸ್ಸಿಗೆ ಆಘಾತವಾಗಿ ಸಮಾಜದಲ್ಲಿ ಅವರಿಗಿದ್ದ ಗೌರವ ಕಡಿಮೆಯಾದಂತೆ ಆಗಲಿಲ್ಲವೇ ? ಮತ್ತು ಇದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಧಕ್ಕೆ ಬರುವುದಿಲ್ಲವೇ ?

ಶ್ರೀ ಜಿ.ಬಿ. ಶಂಕರ್‌ರಾವ್.—ಬಡ್ತಿ ಆಧಾರದ ಮೇಲೆ ನೇಮಕ ಮಾಡುವಾಗ ಸೀನಿಯಾರಿಟಿ-ಕಮ್-ಮೆರಿಟ್ ಮೇಲೆ ಮಾಡುತ್ತೇವೆ. ೧೯೬೪ ಹಾಗೂ ೧೯೬೫ರಲ್ಲಿ ಕೆಲವರಿಗೆ ಕ್ವಾಲಿಫಿಕೇಷನ್ ಇದ್ದರೂ ಸಹ ಸೀನಿಯಾರಿಟಿ ನೋಡಿ ನಾವು ಪ್ರಮೋಷನ್ ಕೊಡಬೇಕಾಗುತ್ತದೆ. ಕೇವಲ ಕ್ವಾಲಿಫಿಕೇಷನ್ ಆಧಾರದ ಮೇಲೆ ಪ್ರಮೋಷನ್ ಕೊಡುವುದಕ್ಕಾಗುವುದಿಲ್ಲ.

ಶ್ರೀ ಪಿ.ಎನ್. ರೆಡ್ಡಿ.—ನನ್ನ ಕೊನೆಯ ಪ್ರಶ್ನೆಗೆ ಉತ್ತರವಾಗಿ ದರ್ಜೆ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಸೇವಾ ಜೇಷ್ಠತೆ ಹಾಗೂ ಅರ್ಹತೆ ಆಧಾರದ ಮೇಲಿಂದ ಮಾತ್ರ ಬಡ್ತಿ ಕೊಡಲಾಗಿದ್ದು ಹಿಂಬಡ್ತಿ ಹೊಂದಿದವರಿಗೆ ಅನ್ಯಾಯವಾಗಿಲ್ಲವೆಂದು ಹೇಳಿದ್ದೀರಿ. ಈ ಬಗ್ಗೆ ನನ್ನ ಮನವಿ ಏನೆಂದರೆ, ಈ ಕ್ರಮದಿಂದ ೨೦೦ ರಿಂದ ೨೫೦ ಜನರಿಗೆ ಅನ್ಯಾಯವಾಗಿದೆ, ಹಿಂದಿನ ಸರ್ಕಾರ ಮಾಡಿದ ತಪ್ಪನ್ನು ನಮ್ಮ ಈಗಿನ ಸರ್ಕಾರ ಸರಿಪಡಿಸಲಾಗುತ್ತದೆಂಬ ಆಶ್ವಾಸನೆಯನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆಯೇ ?

ಶ್ರೀ ಜಿ.ಬಿ. ಶಂಕರ್‌ರಾವ್.—ಆ ರೀತಿ ಆಶ್ವಾಸನೆ ಕೊಡುವುದಕ್ಕೆ ಬರುವುದಿಲ್ಲ. ಕೇವಲ ಕ್ವಾಲಿಫಿಕೇಷನ್ ಒಂದನ್ನೇ ನೋಡಿ ಬಡ್ತಿ ಕೊಡುವುದಕ್ಕಾಗುವುದಿಲ್ಲ. ಇದರ ಜೊತೆಗೆ ನಾವು ಸೀನಿಯಾರಿಟಿಯನ್ನು ಸಹ ನೋಡಬೇಕಾಗುತ್ತದೆ.

ಶ್ರೀ ಪಿ.ಎನ್. ರೆಡ್ಡಿ.—೧೯೭೨ರಲ್ಲಿ ಅಂದರೆ ಅದಕ್ಕೂ ಹಿಂದೆ ಸ್ನಾತಕೋತ್ತರ ಪದವಿ ಪಡೆದವರು ಜೂನಿಯರ್ ಕಾಲೇಜುಗಳಲ್ಲಿ ೪-೫ ವರ್ಷಗಳ ಕಾಲ ಉಪನ್ಯಾಸಕರಾಗಿ ಕೆಲಸ ಮಾಡಿದ್ದಾರೆ. ಇಂತಹವರು ಈಗ ಹಿಂಬಡ್ತಿ ಹೊಂದಿದ್ದಾರೆ. ಈಗ ಇಂತಹ ಸುಮಾರು ೨೦೦ ರಿಂದ ೨೫೦ ಜನರಿಗೆ ಅನ್ಯಾಯವಾಗಿದೆ. ಆದಕಾರಣ ಈ ಕೇಸನ್ನು ಕ್ಯಾಬಿನೇಟ್ ಮುಂದೆ ಇಟ್ಟು ಸರಿಪಡಿಸಲಾಗುತ್ತದೆಂಬ ಆಶ್ವಾಸನೆಯನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆಯೇ ?

ಶ್ರೀ ಜಿ. ಬಿ ಶಂಕರ್‌ರಾವ್.—ಆ ರೀತಿ ಆಶ್ವಾಸನೆ ಕೊಡುವುದಕ್ಕೆ ಬರುವುದಿಲ್ಲ. ಏಕೆಂದರೆ ೧೯೭೨ಕ್ಕೆ ಮುಂಚೆಯೇ ಅವರು ನೇಮಕವಾಗಿದ್ದರೆ ಬಡ್ತಿ ಕೊಡಬಹುದಾಗಿತ್ತು. ಆದರೆ ಅವರು ೧೯೭೨ರ ನಂತರ ನೇಮಕವಾಗಿದ್ದರೆ ಬಡ್ತಿ ಕೊಡುವುದಕ್ಕೆ ಬರುವುದಿಲ್ಲ. ಸೀನಿಯಾರಿಟಿಯನ್ನು ಸಹ ಮೆರಿಟ್ ಜೊತೆಗೆ ನೋಡಬೇಕಾಗುತ್ತದೆ.